ಹೇಳಲಾಗಿದೆ. ದಿವ್ಯ ಮೌನದಾಳದ ಭಂಗಿಯಲ್ಲಿರುವ ಮಹಾತ್ಮರ ಸುಕ್ಕುಗಟ್ಟಿದ ಹಣೆಯ ಎಡಭಾಗದಲ್ಲಿ ಚಿತ್ರದುರ್ಗದ ಕೋಟೆಯ ಮುಂದೆ ಬಲಭಾಗದಲ್ಲಿರುವ ನಾಗರಹಾವಿನಂತೆ ನರವೊಂದು ಎದ್ದು ಕಾಣುತ್ತಿದೆ. ದುರ್ಗದ ಕೋಟೆಯ ಹಾಗೆಯೆ ಸಂಕೀರ್ಣ ವ್ಯಕ್ತಿತ್ವವನ್ನು ಹೊಂದಿದ ಗಾಂಧಿಯವರ ಈ ಚಿತ್ರದ ಹಿಂದಿನ ಕತೆ ತಿಳಿದ ಮೇಲೆ ಇದನ್ನು ನೋಡುವಾಗ, ಮಮ್ಮಲ ನೋವುಂಟಾಗುತ್ತದೆ. ಕಸ್ತೂರಬಾ ಅವರ ಅನಾರೋಗ್ಯದ ಪತ್ರವೊಂದು ಸತ್ಯಾಗ್ರಹದಲ್ಲಿ ನಿರತರಾಗಿದ್ದ ಗಾಂಧಿಯವರಿಗೆ ತಲುಪಿದಾಗ ಗಾಂಧೀಜಿ ಬರೆದ ಮಾರೋಲೆಯಲ್ಲಿ ಮಡದಿಯ ಅನಾರೋಗ್ಯಕ್ಕೆ ಕನಿಕರಿಸುತ್ತ 'ನಿನ್ನ ಕೊನೆಯ ಗಳಿಗೆಯಲ್ಲೂ ನಾನು ಜೊತೆಯಲ್ಲಿರಲಾರದ ಸ್ಥಿತಿ ಬಂದರೆ ನನ್ನನ್ನು ನೀನು ಕ್ಷಮಿಸು' ಎಂದು ಬರೆದಿದ್ದುದು ಅವರಿಗೆ ಆ ಕ್ಷಣಕ್ಕೆ ನೆನಪಾಗಿರಬಹುದೇನೊ.



ಗೆರೆಗಳನ್ನು ಕೈಯಲ್ಲಿಯೆ ಮೂಡಿಸಬೇಕಾದ ಕಾಲವೊಂದಿತ್ತಂತೆ. ಇಂಟರ್ನೆಟ್ ಎಂಬ ಮಾಯಾವಿ ಬೇರೆಯದೆ ಲೋಕವೊಂದನ್ನು ಸೃಜಿಸಿದೆ. ಗೂಗಲ್ ಕೇಳಿದರೆ ಸಾವಿರಾರು ಸಾಂದರ್ಭಿಕ ಚಿತ್ರಗಳನ್ನು ಹೆಕ್ಕಿಕೊಡುತ್ತದೆ. ನಾವೆಲ್ಲ ಕಾಲೇಜು ಮೆಟ್ಟಿಲು ಹತ್ತಿದಾಗ ಕಾಲೇಜಿಗೆ ಕೊಡಲು ಪಾಸ್ ಪೋರ್ಟ್ ಸೈಜಿನ ಚಿತ್ರಕ್ಕಾಗಿ ಸ್ಟುಡಿಯೋಕ್ಕೆ ಧಾಂಗುಡಿ ಇಡುತ್ತಿದ್ದೆವು. ಸ್ಟುಡಿಯೊ ಹೊಕ್ಕರೆ ಅದೊಂದು ನಿಜವಾದ ದೇವತಾಕನ್ಯೆಯರ ಲೋಕವೆ ಆಗಿರುತ್ತಿತ್ತು. ನಾವು ಐಶ್ವರ್ಯ ರೈ ಅನ್ನು ಮೊದಲು ನೋಡಿದ್ದು ಸ್ಟುಡಿಯೋದ ಚಿತ್ರಗಳಲ್ಲೆ. ನಮ್ಮ ಚಿತ್ರ ನಮಗೆ ಗೊತ್ತಿಲ್ಲದ ಹಾಗೆ ಬೆಂಗಳೂರಿಗೆ ತಲುಪಿ ಅಲ್ಲಿಂದ ವಾಪಾಸು ಸ್ಟುಡಿಯೊಕ್ಕೆ ಬರಬೇಕಾದ ಸಪ್ತಾಹದಲ್ಲಿರುವಾಗ ನಾವು ಅದನ್ನು ಪಡೆಯಲು ತುದಿಗಾಲಲ್ಲಿರುತ್ತಿದ್ದೆವು. ಕೆಲವು ಗೆಳೆಯರು ತಮ್ಮ ಗೆಳತಿಯರೊಂದಿಗೆ ನಿಂತು ತೆಗಿಸಿದ ಚಿತ್ರಗಳು ಅವಾಂತರಕ್ಕೂ ಕಾರಣವಾಗಿದ್ದವು. ರಂಗಪ್ಪನ ಸ್ಟುಡಿಯೋದಲ್ಲಿ ಚಿತ್ರ ತೆಗಿಸಿಕೊಂಡಿದ್ದೇ ನಿರ್ಮಲಾಳ ಬಾಳಿಗೆ ಹುಳಿಯಾಗುವುದನ್ನು ಚಿತ್ತಾಲರ 'ಮೂರುದಾರಿಗಳು' ಕಾದಂಬರಿಯಲ್ಲಿ ನೋಡಿದ್ದೇವೆ.

ಪತ್ರಿಕೆಗಳಲ್ಲಿ, ನಿಯತಕಾಲಿಕೆಗಳಲ್ಲಿ ಪ್ರಕಟಗೊಳ್ಳುವ ಲೇಖನ, ಪ್ರಬಂಧ, ಕತೆ, ಕವಿತೆಗಳಿಗೆ ಪೂರಕವಾದ ಚಿತ್ರಗಳಿರುತ್ತವೆ. ಲೇಖಕರು ಮತ್ತು ಚಿತ್ರಕಲಾವಿದರು ಅಜ್ಞಾತರಾಗಿಯೆ ಸ್ಪಂದಿಸುವ ಅಪೂರ್ವ ವಿದ್ಯಮಾನವಿದು. ಯಾರೊ ಬರೆದ ಕತೆಗಳಿಗೆ ಚಿತ್ರಕಲಾವಿದನೂ ಸಹಸ್ಪಂದನಶೀಲನಾಗುತ್ತ ಕೃತಿಯ ಪ್ರತಿಕೃತಿಗೂ ಕಾರಣನಾಗುತ್ತಾನೆ. ಕೆಲವೊಮ್ಮೆ ಪತ್ರಿಕೆಗಳಲ್ಲಿ ಪ್ರಕಟವಾಗುವ ವ್ಯಂಗ್ಯಚಿತ್ರಗಳು ದೊಡ್ಡ ಕೃತಿಗಳಿಗೂ ಹೆಚ್ಚು ಪರಿಣಾಮಕಾರಿಯಾಗಿರುತ್ತವೆ. ಮಧ್ಯಪ್ರದೇಶದಲ್ಲಿ ಬುಡಕಟ್ಟು ವ್ಯಕ್ತಿಯ ಮೇಲೆ ಅನಾಗರಿಕನೊಬ್ಬ ಮೂತ್ರ ಮಾಡಿದ ಅಮಾನುಷ ಪ್ರಕರಣ ಚಿತ್ರರೂಹು ಪಡೆದು ಉಂಟುಮಾಡಿದ ಪರಿಣಾಮವನ್ನು ಇಲ್ಲಿ ನೆನೆಯಬೇಕು. ಯುದ್ಧಪೀಡಿತ ಸಿರಿಯಾ, ಉಕ್ರೇನ್‌ನ ಚಿತ್ರಗಳು, ಸಂಘರ್ಷಪೀಡಿತ ಮಣಿಪುರದ ಚಿತ್ರಗಳು ಕರುಳುಹಿಂಡಿ ಯಾತನಾ ಲೋಕಕ್ಕೆ ಎಳೆದೊಯ್ಯುತ್ತವೆ. ಸಾಹಿತ್ಯಕೃತಿಗಳ ಮೇಲೆ ಮೂಡಿಬರುವ ಚಿತ್ರಗಳು ಅವುಗಳ ಅರ್ಥಸಾಧ್ಯತೆಯನ್ನು ಕ್ವಚಿತ್ತಾಗಿ ಮತ್ತು ಸಶಕ್ತವಾಗಿ ಹೇಳುವಲ್ಲಿ ಸಂಕೇತಗಳಾಗಿ ಕೆಲಸ ಮಾಡುತ್ತವೆ. ಅಂತೆಯೆ ಅವು ತೀಕ್ಷ್ಣ ಕವಿಮನಸಿನ ಚಿತ್ರಗಳೂ ಆಗಿರುತ್ತವೆ. ಈಚೀಚೆಗೆ ಸಾಮಾಜಿಕ ಜಾಲತಾಣಗಳಲ್ಲಿ ಮುದ್ರಣದ ಹಂತದಲ್ಲಿರುವ ತಮ್ಮ ಪುಸ್ತಕದ ಮುಖಪುಟ ಹೇಗಿರಬೇಕೆಂದು ಸಹೃದಯರ ಅಭಿಪ್ರಾಯಕ್ಕಾಗಿ ಹರಿಯಬಿಡುವ ಟ್ರೆಂಡೊಂದು ಶುರುವಾಗಿದೆ. ಛಂದಸ್ಸು, ವ್ಯಾಕರಣ, ಚರಿತ್ರೆ, ಮೀಮಾಂಸೆ, ಸಂಶೋಧನೆ ಮುಂತಾದ ಶಾಸ್ತ್ರಪ್ರಕಾರದ ಕೃತಿಗಳಿಗೆ ಚಿತ್ರಗಳ ಗೊಡವೆಯಿಲ್ಲ. ಸೃಜನಶೀಲ ವೈಚಾರಿಕ ಮತ್ತು ವಿಮರ್ಶಾತ್ಮಕ ಕೃತಿಗಳು ಈ ರೂಪಕ ಭಾಷೆಯ ಚಿತ್ರಗಳನ್ನು ಅಪೇಕ್ಷಿಸುತ್ತವೆ. ಆದಾಗ್ಯೂ ಸೃಜನಶೀಲ ಕೃತಿಗಳೆಲ್ಲವೂ ನಾವು ಕಲ್ಪಿಸಿಕೊಳ್ಳಬೇಕಿರುವ ಚಿತ್ರಗಳು ತಾನೆ?

●